



ಕಲರ್ ಡೆನಿಮ್ ಕೂಡ ಬಂದಿದ್ದು, ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಲು, ರಂಗು ರಂಗಿನ ಶರ್ಟ್, ಪ್ಯಾಂಟ್ ಧರಿಸಲು ಈ ದಿರಿಸು ಸಹಾಯಕ. ಹೀಗಾಗಿ ಫ್ಯಾಷನ್‌ಪ್ರಿಯರನ್ನು, ಕಾಲೇಜು ಹುಡುಗಿಯರನ್ನು ಕಲರ್ ಡೆನಿಮ್ ಬಹುವಾಗಿ ಸೆಳೆಯುತ್ತಿದೆ. ಇಂತಹ ಉಡುಪಿನೊಂದಿಗೆ ಹೈಹೀಲ್ಡ್ ಅಥವಾ ಸ್ಯಾಂಡಲ್ಸ್ ಹಾಕಿಕೊಂಡೂ ಸ್ಟೈಲಿಷ್ ಲುಕ್ ಪಡೆಯಬಹುದು.

## ಚಳಿಗೆ ಬೇಕು ಡೆನಿಮ್ ಜಾಕೆಟ್

ಚಳಿಗಾಲಕ್ಕೆ ಬೆಚ್ಚಗಿನ ಉಡುಪು ಬಯಸುತ್ತದೆ ದೇಹ. ಡೆನಿಮ್ ಜಾಕೆಟ್ ಮೈಗೆ ಬೆಚ್ಚನೆಯ ಅನುಭವ ಮೂಡಿಸುವುದಲ್ಲದೆ, ಮನಕ್ಕೆ ಬೆಚ್ಚನೆಯ ಭಾವವನ್ನೂ ಸ್ಫುರಿಸುತ್ತದೆ. ಹೀಗಾಗಿಯೇ ಇಂದು ಡೆನಿಮ್ ಇಷ್ಟೊಂದು ಟ್ರೆಂಡಿ ಉಡುಗೆಯಾಗಲು ಕಾರಣ.

ಡೆನಿಮ್‌ಗೆ ಕಾಂಬಿನೇಷನ್ ಉಡುಗೆ ಅತ್ಯಂತ ಸೂಕ್ತ. ತಿಳಿಬಣ್ಣದ ಜೀನ್ಸ್ ಉಡುಪಿನ ಮೇಲೆ ಗಾಢ ಬಣ್ಣದ ಜಾಕೆಟ್ ಆಕರ್ಷಕವೆನಿಸುತ್ತದೆ. ಇದೇ ಬಣ್ಣಗಳನ್ನು ಅದಲು ಬದಲಾಗಿಯೂ ಬಳಸಬಹುದು. ಬಿಳಿ ಬಣ್ಣದ ದಿರಿಸು ಇಷ್ಟ ಪಡುವವರು ಅದರ ಮೇಲೆ ಗಾಢ ನೀಲ ವರ್ಣದ ಡೆನಿಮ್ ಜಾಕೆಟ್ ಹಾಕಿದರೆ ಇನ್ನಷ್ಟು ಸುಂದರ. ಹೂಗಳಿಂದ ತುಂಬಿದ ಕುರ್ತಾದ ಮೇಲೂ ಇದು ಮ್ಯಾಚ್ ಆಗುತ್ತದೆ.

ಜಾಕೆಟ್‌ನಲ್ಲಿ ಹಲವು ಆಕರ್ಷಕ ಚಿತ್ತಾರದವು ಬಂದಿವೆ. ಇಂತಹ ವಿನ್ಯಾಸ ಥಟ್ಟನೆ ಸೆಳೆಯುತ್ತದೆ. ಚಂದದ ಶೋ ಬಟನ್ ಇರುವ ಜಾಕೆಟ್ ಮಕ್ಕಳಿಗೂ ಇಷ್ಟವಾಗುತ್ತದೆ. ಕಸೂತಿ ಹಾಕಿದ, ಕುಸುರಿ ಇರುವಂಥ ಜಾಕೆಟ್ ಫ್ಯಾಷನ್‌ಗೂ ಸೈ ಎನಿಸಿದೆ.

## ವಯಸ್ಸಿನ ಮಿತಿ ಇಲ್ಲ...

ಹಾಗೆಂದು ಡೆನಿಮ್ ಉಡುಪು ಹೊಸ ಬಗೆಯದಲ್ಲ. 1960ರ ದಶಕದಲ್ಲೂ ಡೆನಿಮ್ ಸ್ಕರ್ಟ್ ಫ್ಯಾಷನ್ ಲೋಕದಲ್ಲಿ ಚಾಲ್ತಿಯಲ್ಲಿತ್ತು. ಡೆನಿಮ್ ಸ್ಕರ್ಟ್ ಧರಿಸಲು ವಯಸ್ಸಿನ ಮಿತಿ ಅಂತೇನೂ ಇಲ್ಲ. ಪುಟ್ಟ ಹುಡುಗಿಯಿಂದ ಹಿಡಿದು ಅರುವತ್ತರ ಅಂಚಿನ ಮಹಿಳೆಯರೂ ಧರಿಸಬಹುದು. ಡೆನಿಮ್ ಸ್ಕರ್ಟ್‌ನಲ್ಲೂ ಅದೆಷ್ಟು ಬಗೆ, ಎಷ್ಟೊಂದು ವಿನ್ಯಾಸ! ಫ್ಲೇರ್ಡ್ ಸ್ಕರ್ಟ್, ಪೆನ್ಸಿಲ್ ಸ್ಕರ್ಟ್, ಫ್ಲೋರಲ್ ಸ್ಕರ್ಟ್, ಮಿನಿ, ಮಿಡಿ ಸ್ಕರ್ಟ್, ಎ–ಲೈನ್ ಸ್ಕರ್ಟ್, ಲೇಯರ್ಡ್ ಸ್ಕರ್ಟ್, ಪ್ಲಸ್ ಸೈಜ್ ಸ್ಕರ್ಟ್.. ಹೀಗೆ ಒಂದೇ ಎರಡೇ!

ಡೆನಿಮ್ ಉಡುಗೆ ಧರಿಸಿದಾಗ ಯಾರೇ ಆಗಲಿ, ಮನಮೋಹಕವಾಗಿ ಕಾಣುವುದರಲ್ಲಿ ಸಂಶಯವೇ ಇಲ್ಲ. ಫ್ಯಾಷನ್ ಜಗತ್ತಿನಲ್ಲಿ ಇದು ಮರೆಯಾಗುವುದೂ ಇಲ್ಲ. ■